# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-3275/2014/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:23-09-2017.

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ***

ವಿಷಯ: ಶ್ರೀ ವೆಂಕಟರಮಣಯ್ಯ, ಬಿನ್ ಲೇಟ್ ತಿಮ್ಮೇಗೌಡ, ವಾಸ: ಚಿಕ್ಕೇನಹಳ್ಳಿ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ವೆಂಕಟರಮಣಯ್ಯ, ಬಿನ್ ಲೇಟ್‌॥ ತಿಮ್ಮೇಗೌಡ, ವಾಸ: ಚಿಕ್ಕೇನಹಳ್ಳಿ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ.ಗುರುಸ್ವಾಮಿ, ಸಿ.ಎಸ್., ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೆಳಗಾಳು, ಕನಕಪುರ ತಾಲ್ಲೂಕ್, ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದಾಖಲಿಸಿ ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಚಿಕ್ಕೇನಹಳ್ಳಿಯ ಕೆರೆ ಕೆಲಸದ ಬಗ್ಗೆ ಸರ್ಕಾರದಿಂದ ಅನುದಾನ ಬಂದಿತ್ತು. ಸದರಿ ಅನುದಾನದ ಪ್ರಕಾರ ಕೆರೆ ಕೆಲಸವನ್ನು ಪೂರ್ತಿ ಮಾಡಿಲ್ಲ. ಹಳೆ ಕಲ್ಲು ಕಿತ್ತು ಹಾಕಿ ಹೊಸದಾಗಿ ಹಾಕಿರುತ್ತಾರೆ. ರಾಮನಗರ ಸಣ್ಣ ನೀರಾವರಿ ಇಲಾಖೆಯವರು ಕೆರೆ ದುರಸ್ತಿ ಮಾಡಿದ್ದು, ಕೆರೆಗೆ ಸೇರಿದ ಸ್ವತ್ತಿಗೆ ಕಲ್ಲನ್ನು ಸಹ ಹಾಕಿದ್ದಾರೆ. ಆದರೆ, ಮೊಗಣಚಾರಿ ಎನ್ನುವವರು ತನಗೆ ಇಷ್ಟ ಬಂದಂತೆ ಕೆರೆಯ ಜಾಗವನ್ನು ಒತ್ತುವರಿ ಮಾಡಿ ಅದರಲ್ಲಿ ತೆಂಗಿನ ಸಸಿಗಳನ್ನು ನೆಟ್ಟು ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡಿದ್ದಾರೆ. ಕೆರೆ ದುರಸ್ತಿಗೆ ರೂ.9.50 ಲಕ್ಷಗಳ ಅನುದಾನ ಪಡೆದು ಕೂಲಿ ಕಾರ್ಮಿಕರಿಂದ ಕೆಲಸ ಮಾಡಿಸಿದೇ ಜೆ.ಸಿ.ಬಿ. ಯಿಂದ ಕಾಮಗಾರಿ ಮಾಡಿಸಿ ಸರ್ಕಾರಕ್ಕೆ ಮೋಸ ಮಾಡಿದ್ದಾರೆ ಅಂತ ದೂರು ಸಲ್ಲಿಸಿದ್ದಾರೆ.

3. ಈ ದೂರನ್ನು ಮುಖ್ಯ ಇಂಜಿನಿಯರ್, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಇವರಿಗೆ ವಹಿಸಿ ತನಿಖೆ ಮಾಡಿ ವರದಿ ಸಲ್ಲಿಸುವಂತೆ ನಿರ್ದೇಶಿಸಲಾಗಿದೆ.

(ಎ) ಅದರಂತೆ ಸಹಾಯಕ ಕಾರ್ಯಪಾಲಕ ಇಂಜನೀಯರ್, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ತನಿಖೆ ಮಾಡಿ ವರದಿ ಸಲ್ಲಿಸಿದ್ದು, ಚಿಕ್ಕೇನಹಳ್ಳಿ ಗ್ರಾಮದ ಗೌಡಿಗೆರೆ ಗ್ರಾಮದ ಅಭಿವೃದ್ಧಿ ಕಾಮಗಾರಿಯನ್ನು ಅನುದಾನಕ್ಕೆ ತಕ್ಕಂತೆ ನಿರ್ವಹಿಸಿರುವುದಿಲ್ಲ

ಎನ್ನುವ ಆರೋಪದ ಮೇಲೆ ಸ್ಥಳ ತನಿಖೆ ಮಾಡಿದಾಗ ಒತ್ತುವರಿ ಆಗಿದ್ದ ಕೆರೆಯ ಭಾಗವನ್ನು ಜಿಲ್ಲಾಢಾಳಿತದವರು ತೆರವುಗೊಳಿಸಿದ್ದಾರೆ. ಕೆರೆಯ ಅಭಿವೃದಿ ಕಾಮಗಾರಿ ಅನುದಾನಕ್ಕೆ ತಕ್ಕಂತೆ ನಿರ್ವಹಿಸಿಲ್ಲ ಎನ್ನುವ ಆರೋಪಗಳು ಸಾಭೀತಾಗಿಲ್ಲ ಅಂತ ಅಭಿಪ್ರಾಯಪಟ್ಟಿದ್ದಾರೆ.

4. ತನಿಖಾ ವರದಿಯ ಮೇಲೆ ದೂರುದಾರರು ತಮ್ಮ ಪ್ರತ್ಯೂತ್ತರವನ್ನು ಸಲ್ಲಿಸಿದ್ದು, ಕೆರೆಯ ದಕ್ಷಿಣ ಭಾಗದಲ್ಲಿ ಯಾರು ಸಹ ಕಣ್ಣೆತ್ತಿ ನೋಡುತ್ತಿಲ್ಲ. ಕೆರೆಗೆ ಗಾಜು, ಇಟ್ಟಿಗೆ ಚೂರು, ಹಳೆಯ ಹಂಚು ಕೊಳಕು ಗಲೀಜು ತುಂಬುತ್ತಿದ್ದಾರೆ. ಅಗಲವಾಗಿದ್ದ ಕೆರೆ ಕೋಡಿಯನ್ನು ಕಲ್ಲು ಹಾಕಿ ಕಿರಿದಾಗಿ ಮಾಡಿದ್ದಾರೆ. ಕೆರೆಯ ಅಂಗಳದಲ್ಲಿದ್ದ ಮಣ್ಣನ್ನು ಲೋಕೋಪಯೋಗಿ ಇಲಾಖೆ ಮತ್ತು ಇಟ್ಟಿಗೆ ಕಂಪನಿಯವರು ಎಗ್ಗಿಲ್ಲದೇ ತೆಗೆದುಕೊಂಡು ಹೋಗುತ್ತಾರೆ. ಒಂದು ಒಳ್ಳೆಯ ಕೆಲಸ ಮಾಡಲು ಹೋದರೆ ತುಂಬಾ ದುಃಖ ಅನುಭವಿಸಬೇಕಾಗುತ್ತದೆ ಅಂತ ಈಗ ತಿಳಿಯುತ್ತಿದೆ. ಊರ ಕೆರೆಯನ್ನು ಉಳಿಸಿಕೊಡುವಂತೆ ಕೇಳಿಕೊಂಡಿರುತ್ತಾರೆ.

5. ದೂರುದಾರರಿಗೆ ಸುಮಾರು 82 ವರ್ಷ ವಯಸ್ಸಾಗಿದ್ದು, ಕೇವಲ ಕೆರೆಯನ್ನು ಉಳಿಸಿಕೊಳ್ಳಬೇಕು ಎನ್ನುವ ಒಂದೇ ಉದ್ದೇಶದಿಂದ ಈ ದೂರನ್ನು ಸಲ್ಲಿಸಿದ್ದಾರೆ. ತನಿಖಾಧಿಕಾರಿಯವರ ವರದಿಯ ಪ್ರಕಾರ ಕೇವಲ 3 ಗುಂಟೆಯಷ್ಟು ಕೆರೆ ಅಂಗಳದಲ್ಲಿ ಒತ್ತುವರಿ ಆಗಿದ್ದು, ಅದನ್ನು ರಾಮನಗರ ಜಿಲ್ಲಾ ಪಂಚಾಯತ್ ವತಿಯಿಂದ ತೆರವುಗೊಳಿಸಲಾಗಿದೆ. ಅಲ್ಲಲ್ಲಿ ಮೆಳೆ ಕಡಿದಿರುವ ಫೋಟೋಗಳನ್ನು ಮತ್ತು ರಿವೆಟ್‌ಮೆಂಟ್ ಕಿತ್ತು ಕಟ್ಟಿರುವ ಪೋಟೋಗಳನ್ನು ಸಲ್ಲಿಸಿದ್ದಾರೆ. ಹೊಸದಾಗಿ ರಿವೆಟ್‌ಮೆಂಟ್ ನಿರ್ಮಿಸಿರುವ ಬಗ್ಗೆ ಫೋಟೋಗಳನ್ನು ಹಾಕಿದ್ದಾರೆ. ದಕ್ಷಿಣ ದಿಕ್ಕಿನ ಕಡೆ ಯಾರು ಸಹ ಕಣ್ಣೆತ್ತಿ ನೋಡುತ್ತಿಲ್ಲ ಅಂತ ದೂರುದಾರರು ಆಪಾದಿಸಿರುತ್ತಾರೆ. ಮುಖ್ಯವಾಗಿ ದೂರುದಾರರು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಸ್ಥಳ ಪರಿಶೀಲನೆ ಮಾಡಿದ ನಂತರ ಇಟ್ಟಿಗೆ, ಕಸ-ಕಡ್ಡಿ ತಂದು ತುಂಬುತ್ತಿದ್ದಾರೆ ಸರ್ವೆಯರ್‌ರವರು ಮೋಸದ ಅಳತೆ ಮಾಡಿದ್ದಾರೆ ಅಂತ ಹೇಳುತ್ತಿದ್ದಾರೆ. ಮಹಜರ್‌ಗೆ ದನ ಕಾಯುವವರ ಸಹಿ ತೆಗೆದುಕೊಂಡಿದ್ದಾರೆ ಅಂತ ಸಹ ಆಪಾದಿಸಿರುತ್ತಾರೆ. ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ ಕೈಗೊಳ್ಳಲಾಗಿದೆ ಅಂತ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಆದ ಎದುರುದಾರರು ಕೆರೆಗಳನ್ನು ಸಂರಕ್ಷಿಸುವ ಸಲುವಾಗಿ ಗಡಿಭಾಗಕ್ಕೆ ತಂತಿ ಬೇಲಿ ಅಳವಡಿಸುವ ಕುರಿತು ಸಕ್ಷಮ ಪ್ರಾಧಿಕಾರಕ್ಕೆ ಪ್ರಾಸ್ತವನೆಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

6. ವಿವಾದಿತ ಕೆರೆಯ ದಕ್ಷಿಣ ದಿಕ್ಕಿನಲ್ಲಿ ಏನು ಇದೆ ಅಂತ ಕಣ್ಣೆತ್ತಿ ನೋಡುತ್ತಿಲ್ಲ ಅಂತ ದೂರುದಾರರು ಆಪಾದಿಸಿದ್ದರಿಂದ, ಈ ಪ್ರಕರಣವನ್ನು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ರಾಮನಗರ ಇವರಿಗೆ ತನಿಖೆಗೆ ವಹಿಸಿ ಗೌಡಿಗೆರೆಯ ಕೆರೆಯಲ್ಲಿ ಇಟ್ಟಿಗೆ ಕಸಕಡ್ಡಿ ಮತ್ತು ಇತರೇ ತ್ಯಾಜ್ಯ ವಸ್ತುಗಳನ್ನು ತುಂಬಲಾಗುತ್ತಿದೆಯೇ ಎನ್ನುವ ವರದಿಯನ್ನು ಸಲ್ಲಿಸಲು

ಮತ್ತು ಎದುರುದಾರರಿಗೆ ಕೆರೆಗಳಿಗೆ ತಂತಿ ಬೇಲಿ ನಿರ್ಮಿಸುವ ವಿಷಯದಲ್ಲಿ ಏನು ಪ್ರಗತಿಯಾಗಿದೆ ಎನ್ನುವ ಬಗ್ಗೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

7. ಅದರಂತೆ, ಎಸ್.ಪಿ. ಕರ್ನಾಟಕ ಲೋಕಾಯುಕ್ತ ರಾಮನಗರ ಇವರು ತನಿಖಾ ವರದಿಯನ್ನು ಸಲ್ಲಿಸಿದ್ದು, ಕೆರೆಯ ಜಾಗವನ್ನು 3 ಜನರು ಒತ್ತುವರಿಪಡಿಸಿಕೊಂಡಿದ್ದರು, ಅದನ್ನು ತೆರವುಗೊಳಿಸಿದ ನಂತರ ಮತ್ತೆ ಒತ್ತುವರಿಗೆ ಒಳಗಾಗಿರುತ್ತದೆ. ಕೆರೆಯ ದಕ್ಷಿಣ ದಿಕ್ಕಿನ ದಡದಲ್ಲಿ ಅನುಪಯುಕ್ತ ಕಲ್ಲು, ಮಣ್ಣು, ಕಾಂಕ್ರೀಟ್ ಚೂರುಗಳು, ಇಟ್ಟಿಗೆ ಮತ್ತಿತರ ತ್ಯಾಜ್ಯ ವಸ್ತುಗಳನ್ನು ಕೆರೆಯ ದಡದಲ್ಲಿ ತುಂಬುತ್ತಿರುವುದು ದೃಢಪಟ್ಟಿದೆ ಅಂತ ವರದಿಯನ್ನು ಸಲ್ಲಿಸಿದ್ದಾರೆ.

8. ಈ ಸಂಸ್ಥೆಯ ತಾಂತ್ರಿಕ ವಿಭಾಗದವರಿಗೆ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ ತಾಂತ್ರಿಕ ವಿಭಾಗದ ಅಧಿಕಾರಿಯವರು ತನಿಖೆ ಮಾಡಿ ವರದಿಯನ್ನು ಸಲ್ಲಿಸಿದ್ದು, ಒತ್ತುವರಿಯಾಗಿದ್ದ ಕೆರೆಯ ಭಾಗವನ್ನು ಜಿಲ್ಲಾಡಳಿತವು ತೆರವುಗೊಳಿಸಿದ್ದಾರೆ ಅಂತ ಕಂಡುಬಂದಿದ್ದು ಕೆರೆಯ ದಕ್ಷಿಣ ಭಾಗದಲ್ಲಿ ದೂರುದಾರರು ಆಪಾದಿಸುತ್ತಿರುವಂತೆ ಇಟ್ಟಿಗೆ ಕಸ ಕಡ್ಡಿ ಇತರೇ ತ್ಯಾಜ್ಯ ವಸ್ತುಗಳನ್ನು ಕೆರೆಯ ದಡದಲ್ಲಿ ತುಂಬಲಾಗುತ್ತಿದೆ, ಇದು ಸಹ ಕೆರೆಯ ಒತ್ತುವರಿಯಾಗುತ್ತದೆ.

9. ಆದ್ದರಿಂದ, ಗೌಡಿಗೆರೆಯ ಚಿಕ್ಕೇನಹಳ್ಳಿಯ ಅಣಜವಾಡಿ ಗ್ರಾಮದ ಸರ್ವೆ ನಂ.135 ರಲ್ಲಿ 4 ಎಕರೆ 14 ಗುಂಟೆ ಪ್ರದೇಶವನ್ನು ಎಲ್ಲಾ ರೀತಿಯ ಒತ್ತುವರಿಗಳಿಂದ ಮುಕ್ತಗೊಳಿಸಲು ಹಾಗೂ ಕೆರೆಯಲ್ಲಿ ತುಂಬಿಸುತ್ತಿರುವ ಕಲ್ಲು, ಮಣ್ಣು, ಕಾಂಕ್ರೀಟ್, ಇಟ್ಟಿಗೆ ಹಾಗೂ ಇತರೇ ತ್ಯಾಜ್ಯಗಳನ್ನು ಹಾಕುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಮತ್ತು ಕೆರೆಯಲ್ಲಿರುವ ತ್ಯಾಜ್ಯಗಳನ್ನು ಹೊರಹಾಕಿ ಕೆರೆಯನ್ನು ಯಥಾಸ್ಥಿತಿಯಲ್ಲಿಡಲು/ಸುಸ್ಥಿತಿಯಲ್ಲಿಡಲು ಅದರ ಸುತ್ತಲೂ ಮುಳ್ಳು-ತಂತಿ ಬೇಲಿಯನ್ನು ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ-1984 ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶಿಫಾರಸ್ಸು ಮಾಡಲಾಗಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 3/9/17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ